ಒ.ಎಸ್.ನಂ. 17/22

ಡಿ. ಡಬ್ಲ್ಯೂ-1

**ದಿನಾಂಕಃ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಿಂದಃ-**

1 ನೇ ವಾದಿ ಮತ್ತು ಅವರ ಗಂಡ ಗೊತ್ತು. ವಾದಿ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ನಾನು ಮತ್ತು ನನ್ನ ತಾಯಿ 1 ನೇ ವಾದಿಯ ಗಂಡನಿಗೆ ಕಾಗದ ಮಾಡಿಕೊಟ್ಟಿರುತ್ತೇವೆ ಎಂದು ದಾವೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಜೊತೆಗೆ 3 ನೇ ಪ್ರತಿವಾದಿ ಸೇರಿ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಆಧಾರ ಪತ್ರವನ್ನು 1 ನೇ ವಾದಿಯ ಗಂಡನ ಹೆಸರಿನಲ್ಲಿ ಮಾಡಿರುತ್ತೇವೆ ಎಂದರೆ ಸರಿ. ಮಾದೇಗೌಡರು ಬದುಕಿದ್ದ ಕಾಲದಲ್ಲಿ ನಮ್ಮ ವಿರುದ್ಧ Pronote ಮೇಲೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. ನಿಪಿ 1 ರಂತೆ 1 ಲಕ್ಷ ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಮುಂದುವರೆದು ತೀರಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ 1 ರ ಆಧಾರ ಪತ್ರದ ಅಡಿಯಲ್ಲಿ 1 ಲಕ್ಷ ಹಣ ವನ್ನು ಪಡೆದುಕೊಂಡಿರುತ್ತೇವೆ ಎಂದು ಇನ್ನೊಂದು ದಾವೆಯಲ್ಲಿ ಹಾಜರುಪಡಿಸಿರುತ್ತೇವೆ ಎಂದರೆ ಸರಿ. ಮೃತ ಮಾದೇಗೌಡರಿಗೆ ನಾನು ಹೇಳುವಂತೆ ಯಾವುದೇ ಹಣ ವಾಪಸ್ಸ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ದಾವೆಗೂ ಸಹ ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ಮಾದೇಗೌಡರಿಗೆ ಹಣ ವಾಪಸ್ಸ ಕೊಟ್ಟಿರುತ್ತೇವೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ತಕರಾರು ಪತ್ರ ಸಲ್ಲಿಸಲು ನಾವೇ ಮಾಹಿತಿ ಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಮೃತ ಮಾದೇಗೌಡರಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಎಂದು ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡಲು ಒಂದೊಂದು ದಾವೆಯಲ್ಲಿ ಒಂದೊಂದು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**